<u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ,</u>
<u>ನವಲಗುಂದ.</u>

ಸಿ. ಸಿ. ನಂಃ **122/2024**

ಪಿ.ಡಬ್ಲ್ಯೂ- **2**
ಸಿ.ಡಬ್ಲೂ- **7**

| | | |
|---|---|---|
| ಹೆಸರು | ಃ- ಶ್ರೀ ಫಕ್ಕೀರಪ್ಪ ಬಂಡಿವಾಡ | |
| ತಂದೆ / ಗಂಡನ ಹೆಸರು | ಃ- ಯಲ್ಲಪ್ಪ | |
| ವಯಾ | ಃ- 51 ವರ್ಷ | |
| ಉದ್ಯೋಗ | ಃ- ಒಕ್ಕಲುತನ | |
| ವಾಸಸ್ಥಳ | ಃ- ಬ್ಯಾಳಾಳ | |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 17-11-2025 |

<u>*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*</u>

1) ಪ್ರಕರಣದ ಆರೋಪಿತರ ಪರಿಚಯವಿದೆ. ಚಾಸಾ-1 ಹಾಗೂ ಚಾಸಾ-4 ರಿಂದ ಚಾಸಾ-6 ರವರ ಪರಿಚಯವಿದೆ.

2) ಸುಮಾರು 1 ವರ್ಷಗಳ ಹಿಂದೆ ಚಾಸಾ-1 ಮತ್ತು ನ್ಯಾಯಾಲಯದ ಎದುರು ಇದ್ದ 3 ನೇ ಆರೋಪಿತನ ನಡುವೆ ಜಗಳವಾಗಿದ್ದು ನಾನು ಚಾಸಾ-1 ರವರು ಕೂಗಿದ ನಂತರ ಅವರಿಗೆ ನವಲಗುಂದದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ 2 ದಿನ ಕಾಲ ದಾಖಲು ಮಾಡಿಸಿರುತ್ತೇವೆ. ನಂತರ ಅವರು ಊರಿಗೆ ಬಂದಿರುತ್ತಾರೆ.

**(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)**

<u>**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**</u>

1) ಈ ಮೇಲೆ ಹೇಳಿದ ಜಗಳವು ದಿನಾಂಕ 02-11-2023 ರಂದು ಆಗಿರುತ್ತದೆ ಎಂದರೆ ಸರಿ. ಚಾಸಾ-1 ರವರು ತಮ್ಮ ಡೈರಿಯನ್ನು ಕಳೆದುಕೊಂಡಿದ್ದು ಆಗ ಚಾಸಾ-4 ರವರು 1 ನೇ ಆರೋಪಿತಳನ್ನು ಕೇಳಲಾಗಿ ಸದರಿಯವರು ಅವರಿಗೆ ತಳ್ಳಿ ಗಾಯ ಪೆಟ್ಟು ಮಾಡಿ ನಾನು ಕೇಳಿ ಬಂದು ತಪ್ಪಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಪೆಟ್ಟಾಗಿದ್ದು ಆಸ್ಪತ್ರೆಗೆ ಸೇರಿಸಿರುತ್ತೇನೆ. 1 ನೇ ಆರೋಪಿತಳು ಚಾಸಾ-4 ರವರಿಗೆ ಹಿತ್ತಲ ಬಾಗಿಲ ಬಳಿ ಇದ್ದ ಇಟ್ಟಂಗಿಯಿಂದ ಬಲಗೈ ಮುಂಗೈಗೆ ಹೊಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2) ಆಗ ಚಾಸಾ-1 ರವರು ಜಗಳ ತಪ್ಪಿಸಲು ಬಂದಾಗ ಆರೋಪಿತರೆಲ್ಲರೂ ಆತನನ್ನು ಸಹ ಹೊಡೆದು ಆತನ ಕೈಬೆರಳು ಕಿತ್ತುವ ಹಾಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಆಗಿರಬಹುದು ಆದರೆ ಚಾಸಾ-1 ರವರಿಗೆ ಪೆಟ್ಟಾಗಿರುತ್ತದೆ. ನಂತರ 3 ನೇ ಆರೋಪಿತನು ಚಾಸಾ-1 ರವರ ಎದೆಗೆ ಕಾಲಿನಿಂದ ಒದ್ದಿದಲ್ಲದೇ, ತಲೆಗೆ ಸಹ ಹೊಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿತನು ಚಾಸಾ-1 ರವರ ಕತ್ತನ್ನು ಹಿಡಿದು ಹೊರಗೆ ದೂಡಿ ಹಾದರಿಗಿತ್ತಿ ಮಗನ ಹೊರಗೆ ಹೋಗಲೇ ಎಂದು ಅವಾಚ್ಯ ಶಬ್ದದಿಂದ ನಿಂದನೆ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

3) ಅನಂತರ ನಾನು, ಚಾಸಾ-5 ಮತ್ತು ಚಾಸಾ-6 ರವರು ಜಗಳ ಬಿಡಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಪೆಟ್ಟಾಗಿದ್ದು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-1 ರವರು ದೂರು ನೀಡಿದ ಬಗ್ಗೆ ಕೇಳಿ ಗೊತ್ತಾಗಿರುತ್ತದೆ ಎಂದರೆ ಸರಿ. ಸದರಿ ಘಟನೆಯ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

*ಪಾಟೀಸವಾಲು ಆರೋಪಿತರ ಪರ ಃ ಶ್ರೀ ವಿ ಪಿ ಪಿ ವಕೀಲರಿಂದ ಃ-*

1) 1 ನೇ ಆರೋಪಿತಳು ಚಾಸಾ-1 ರವರ ಆಸ್ತಿಯಲ್ಲಿ ಹಿಸ್ಸೆ ಕೋರಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾವಿ ಸಲ್ಲಿಸಿದ್ದು ಅದು ಇಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ನಮ್ಮ ಮನೆ ಹಾಗೂ ಚಾಸಾ-1 ರವರ ಮನೆ ಬೇರೆ ಬೇರೆ ಓಣಿಯಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ಮನೆ ಹಾಗೂ ಚಾಸಾ-1 ರವರ ಮನೆ ತುಂಬಾ ಅಂತರದಲ್ಲಿರುತ್ತದೆ ಅಂದರೆ ಸರಿಯಲ್ಲ. ಘಟನೆಯ ದಿನಾಂಕ ನಿಖರವಾಗಿ ಹೇಳಲು ನೆನಪಿಲ್ಲ.

2) ನಾನು ಹಾಗೂ ಚಾಸಾ-1 ರವರ ಅಳಿಯ ಹಣಕಾಸಿನ ವ್ಯವಹಾರ ಮಾಡುತ್ತೇವೆ ಅಂದರೆ ಸರಿಯಲ್ಲ. ಚಾಸಾ-1, ಚಾಸಾ-4 ರವರ ಹಾಗೂ ಆರೋಪಿತರ ನಡುವೆ ಜಗಳವಾದ ಬಗ್ಗೆ ಹಾಗೂ ಅವರಿಗೆ ಪೆಟ್ಟಾದ ಬಗ್ಗೆ ಮತ್ತು ಆಸ್ಪತ್ರೆಗೆ ಸೇರಿದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ

ಸರಿಯಲ್ಲ. ಚಾಸಾ-1 ರವರನ್ನು ಅವರ ಬೊಲೆರೋ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತೇನೆ ನೋಂದಣಿ ಸಂಖ್ಯೆ ಗೊತ್ತಿಲ್ಲ. ಅದನ್ನು ಚಾಲಕನು ಚಲಾಯಿಸಿದ್ದು ಹೆಸರು ಗೊತ್ತಿಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3) ಸದರಿ ಘಟನೆಯ ಬಗ್ಗ ನಾನು ಪೊಲೀಸ ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ. ನನಗೆ ಹಾಗೂ ಆರೋಪಿತರ ನಡುವೆ ವೈಮನಸ್ಸು ಇರುತ್ತದೆ ಅಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಮತ್ತು ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರ ಮನೆತನಕ್ಕೆ ಧಕ್ಕೆಯಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**